ಅಸಲು ದಾವಾ ನಂ.340/2021
ಪಿ.ಡಬ್ಲ್ಯೂ-2

<u>ದಿನಾಂಕಃ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ .ಪಿ.ಎಸ್.ಬಿ. ವಕೀಲರಿಂದ</u>

ಸುಮಾರು 6 ಎಕರೆಗೆ ಈ ದಾವೆಯನ್ನು ಸಲ್ಲಿಸಲಾಗಿದೆ. ವಾದಿಯ ಮನೆತನದ ಬಗ್ಗೆ ಮಾಹಿತಿ ಇದೆ. ವಾದಿಯ ಅಜ್ಜನ ಮನೆತನಕ್ಕೆ ಎಷ್ಟು ಸ್ವತ್ತುಗಳು ಇದ್ದವು ಎಂದು ಹೇಳಲು ಬರುವುದಿಲ್ಲ. ಲಕ್ಷ್ಮಪ್ಪನಿಗೆ ಪಿತ್ರಾರ್ಜಿತ ಆಸ್ತಿಗಳು ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ಲಕ್ಷ್ಮಪ್ಪನ ಹೆಸರಿಗೆ ಖಾತೆ ವರ್ಗಾವಣೆ ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ ಆದರೆ ಅವು ಪಿತ್ರಾರ್ಜಿತ ಆಸ್ತಿಗಳಾಗಿವೆ. ಪಿತ್ರಾರ್ಜಿತ ಸ್ವತ್ತುಗಳು ತಳಬಾಳ್ ಗ್ರಾಮದಲ್ಲಿ ಇರುತ್ತವೆ. ನನ್ನ ಸ್ವಂತ ಊರು ತಳಕಲ್. ಈಗ ನನ್ನ ಹೆಸರಿನಲ್ಲಿ ತಳಬಾಳ್ ಗ್ರಾಮದಲ್ಲಿ ಸ್ವತ್ತುಗಳು ಇಲ್ಲ. ನನ್ನ ಮತ್ತು ಪ್ರತಿವಾದಿಯ ಮನೆ ಬೇರೆ ಬೇರೆ ವಾರ್ಡನಲ್ಲಿ ಇದೆ. ವಾದಿಯರ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. 1 ನೇ ವಾದಿಯ ಮದುವೆ ಸುಮಾರು 40 ವರ್ಷಗಳ ಹಿಂದೆ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿಯು ಧಾರವಾಡ ಜಿಲ್ಲೆ ಕಿತ್ತೂರ್ ನಲ್ಲಿ ವಾಸಿಸುತ್ತಾಳೆ. 2 ನೇ ವಾದಿಯ ಮದುವೆ ಸುಮಾರು 30 ವರ್ಷಗಳ ಹಿಂದೆ ಆಗಿದೆ ಎಂದರೆ ನಿಜ. ಆಕೆ ಕೊಪ್ಪಳದ ಯತ್ನಟ್ಟಿ ಗ್ರಾಮದಲ್ಲಿ ವಾಸಿಸುತ್ತಾಳೆ ಎಂದರೆ ನಿಜ. ವಾದಿಯ ಸಹೋದರಿ ಮೃತ ಪಕ್ಕವ್ವ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ.

ವಾದಿ ಮತ್ತು ಪ್ರತಿವಾದಿಯರು ಕುರುಬ ಜನಾಂಗಕ್ಕೆ ಸೇರಿದ್ದಾರೆ ಎಂದರೆ ನಿಜ ಮತ್ತು ಅವರು ಕುರಿ ಕಾಯುವ ಕೆಲಸ ಮಾಡುತ್ತಿದ್ದರು ಎಂದರೆ ನಿಜ. 1 ನೇ ಪ್ರತಿವಾದಿ ಮೊದಲಿನಿಂದಲೂ ಕುರಿ ಕಾಯ್ದು ಕೊಂಡು ಬಂದಿದ್ದಾರೆ ಎಂದರೆ ನಿಜ. ಈಗ ಒಂದು ಕುರಿಯ ಬೆಲೆ ರೂ. 15000/- ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಂಗಪ್ಪ ಮತ್ತು ಲಕ್ಷ್ಮಪ್ಪ ರವರು ಬೇರೆ ಬೇರೆಯಾಗಿ ವಾಸಿಸುತ್ತಿದ್ದರು ಎಂದರೆ ನಿಜ. 1 ನೇ ಪ್ರತಿವಾದಿ ಜೀವಂತ ಇರುವಾಗ 4 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಎಂದರೆ ನಿಜ. ಅದೇ ರೀತಿ ಆದಾಯವನ್ನು ಆತನೆ ಪಡೆದುಕೊಳ್ಳುತ್ತಿದ್ದ ಎಂದರೆ ನಿಜ. 1 ನೇ ಪ್ರತಿವಾದಿ ತಾನು ಸಾಕಿದ ಕುರಿ ಮತ್ತು ಆಕಳುಗಳ ಆದಾಯದಿಂದ ಬದುಕುತ್ತಿದ್ದ ಎಂದರೆ ನಿಜ. ಇನ್ನೊಂದು ಸ್ವತ್ತನ್ನು ಖರೀದಿ ಮಾಡಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಆದರೆ ಅದನ್ನು ಕೇಳಿದ್ದೇನೆ. ದಾವಾ ಐಟಂ ನಂ.2 ನ್ನು ಯಾವಾಗ ಖರೀದಿ ಮಾಡಲಾಯಿತು ಮತ್ತು ನೊಂದಣಿ ಆದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂಃ 2 ನ್ನು 1 ನೇ ಪ್ರತಿವಾದಿಯು ತಮ್ಮ ಸ್ವಂತ ದುಡಿಮೆಯಿಂದ ಖರೀದಿ ಹಿಡಿದಿದ್ದಾನೆ ಎಂದರೆ ನನಗೆ ಮಾಹಿತಿ ಇಲ್ಲ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯ ತಂದೆ ಹೇಳುತ್ತಿದ್ದ ಎಂದು ನುಡಿಯುತ್ತಾರೆ. ಈ ವಿಷಯವನ್ನು ಯಾವಾಗ ಹೇಳಿದ್ದಾರೆ ಎಂದು ನೆನಪಿಲ್ಲ.

ದಾವಾ ಐಟಂ ನಂಬರ್ 2 ನ್ನು 1 ನೇ ಪ್ರತಿವಾದಿಯೇ ಖರೀದಿ ಹಿಡಿದಾಗಿನಿಂದ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಎಲ್ಲಾರೂ ಒಟ್ಟಾಗಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂಃ 2 ರ ಚೆಕ್ ಬಂದಿ ಗೊತ್ತಿಲ್ಲ. ನಾನು ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಮತ್ತು ತಾಯಿ ಯಾವಾಗ ತೀರಿಕೊಂಡಿದ್ದಾರೆ ಎಂದು ಹೇಳಲು ಬರುವುದಿಲ್ಲ. ಈ ಬಗ್ಗೆ ಮಾಹಿತಿಯನ್ನು ನಾನು ಪ್ರಮಾಣ ಪತ್ರ ಬರೆಯಲು ನೀಡಿಲ್ಲ. ನಾನು ಶಾಲೆ ಕಲಿತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಮಾಹಿತಿ ನನಗೆ ಗೊತ್ತಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಯಲಬುರ್ಗಾ.
ಸಂಚಾರಿ ನ್ಯಾಯಾಲಯ ಕುಕನೂರು.